**ಓ.ಎಸ್. ನಂ. 22/2021** **ಡಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 11.8.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ ಜೆ.ಎಸ್.ಆರ್ ವಕೀಲರಿಂದಃ

ನಾನು 6 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಾನು 3 ರಿಂದ 9 ನೇ ಪ್ರತಿವಾದಿಯರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ. ವಾದಿಯರು ಏನು ಪರಿಹಾರ ಕೋರಿ ಈ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಕರಾರಿಗೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುತ್ತಾತನ ಹೆಸರು ಅಣ್ಣೇಗೌಡ, ಅವರ ಹೆಂಡತಿ ಹೆಸರು ಲಿಂಗಮ್ಮ ಅಲಿಯಾಸ್ ನಿಂಗಮ್ಮ ಆಗಿರುತ್ತದೆ. ಸದರಿ ಅಣ್ಣೇಗೌಡ ಮತ್ತು ಲಿಂಗಮ್ಮನಿಗೆ ಕೆಂಪೇಗೌಡ ಮತ್ತು ಗಿರೀಗೌಡ ಎಂಬ ಇಬ್ಬರು ಮಕ್ಕಳಿರುತ್ತಾರೆ ಎಂದರೆ ಸರಿ. ಕೆಂಪೇಗೌಡರ ಹೆಂಡತಿ ಚಾಮಮ್ಮ ಆಗಿದ್ದು, ಅವರಿಗೆ 5 ಜನ ಮಕ್ಕಳು ಎಂದರೆ ಸರಿ. ಅವರ ಹೆಸರು ರಂಗೇಗೌಡ, ಶಿವಲಿಂಗೇಗೌಡ, ಶಿವರುದ್ರೇಗೌಡ, ನಾರಾಯಣಗೌಡ ಮತ್ತು ಶಿವಣ್ಣೇಗೌಡ ಆಗಿರುತ್ತದೆ ಎಂದರೆ ಸರಿ. ಅವರ ಪೈಕಿ ರಂಗೇಗೌಡ, ಶಿವರುದ್ರೇಗೌಡ ಮತ್ತು ಶಿವಣ್ಣೇಗೌಡ ತೀರಿಕೊಂಡಿರುತ್ತಾರೆ ಎಂದರೆ ಸರಿ. ಶಿವರುದ್ರೇಗೌಡ ನನ್ನ ಚಿಕ್ಕಪ್ಪನಾಗಬೇಕು. ವಾದಿಯರು ಸದರಿ ಶಿವರುದ್ರೇಗೌಡರ ವಾರಸುದಾರರು ಎಂದರೆ ಸರಿ. ನನ್ನ ತಂದೆಗೆ 3 ರಿಂದ 7 ನೇ ಪ್ರತಿವಾದಿಯರು ವಾರಸುದಾರರು ಎಂದರೆ ಸರಿ. 8 ನೇ ಪ್ರತಿವಾದಿ ನನ್ನ ಹೆಂಡತಿ ಎಂದರೆ ಸರಿ. 9 ನೇ ಪ್ರತಿವಾದಿ ನನ್ನ ತಮ್ಮನ ಹೆಂಡತಿಯಾಗಿರುತ್ತಾರೆ. 1 ನೇ ಪ್ರತಿವಾದಿ ನನ್ನ ದೊಡ್ಡಪ್ಪ ಹಾಗೂ 2 ನೇ ಪ್ರತಿವಾದಿ ನನ್ನ ಚಿಕ್ಕಪ್ಪನಾಗಬೇಕು. 10 ರಿಂದ 12 ನೇ ಪ್ರತಿವಾದಿಯರು ಶಿವಣ್ಣೇಗೌಡರ ವಾರಸುದಾರರು ಎಂದರೆ ಸರಿ.

ದಾವಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಆಸ್ತಿಗಳಲ್ಲಿ ಶಿವರುದ್ರೇಗೌಡ ರವರಿಗೆ ಸಮ ಭಾಗ ಇರುತ್ತದೆ ಎಂದರೆ ಸರಿ. ಶಿವರುದ್ರೇಗೌಡರು ತೀರಿಕೊಂಡಿರುವುದರಿಂದ ಅವರ ಭಾಗ ವಾದಿಯರಿಗೆ ಸೇರುತ್ತದೆ ಎಂದರೆ ಸರಿ. ದಾವಆಸ್ತಿಗಳು ಈವರೆವಿಗೂ ವಿಭಾಗವಾಗಿರುವುದಿಲ್ಲ ಎಂದರೆ ಸಾಕ್ಷಿದಾರರು ಬಾಯಿಮಾತಿನಲ್ಲಿ ವಿಭಾಗ ಮಾಡಿ ಮ್ಯುಟೇಶನ್ ಆಗಿರುತ್ತದೆ ಎನ್ನುವರು. ನಾನು 1985 ರಲ್ಲಿ ಜನಿಸಿರುತ್ತೇನೆ. ನಾನು ಹುಟ್ಟುವ ಪೂರ್ವದಲ್ಲಿ ಮತ್ತು ಹುಟ್ಟಿದ ನಂತರ ನಮ್ಮ ಕುಟುಂಬದಲ್ಲಿ ಆಗಿರುವ ಆಸ್ತಿಯ ವ್ಯವಹಾರವನ್ನು ನಮ್ಮ ತಂದೆಯಿಂದ ತಿಳಿದುಕೊಂಡಿರುತ್ತೇನೆ. ಕೆಂಪೇಗೌಡರು ತೀರಿಕೊಂಡ ನಂತರ ಅವರ ವಾರಸುದಾರರಿಗೆ ಪೌತಿ ಮೇರೆಗೆ ಖಾತೆಯಾಗಿರುತ್ತದೆ ಎಂದರೆ ಸರಿ. ವಿಭಾಗವು ಸುಮಾರು 40 ರಿಂದ 50 ವರ್ಷಗಳ ಹಿಂದೆ ಆಗಿರುತ್ತದೆ. ಯಾವ ವರ್ಷದಲ್ಲಿ ವಿಭಾಗವಾಗಿರುತ್ತದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ವಿಭಾಗವಾಗಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಬಾಯಿ ಮಾತಿನಲ್ಲಿ ವಿಭಾಗವಾಗಿ ಮ್ಯುಟೇಶನ್ ಆಗಿರುತ್ತದೆ ಎನ್ನುವರು. ಬಾಯಿ ಮಾತಿನಲ್ಲಿ ವಿಭಾಗವಾಗಿರುವ ಬಗ್ಗೆ ತಕರಾರಿನಲ್ಲಿ ಹೇಳಲು ಯಾವುದೇ ತೊಂದರೆ ಇರಲಿಲ್ಲ. ನಿಪಿ1 ರಿಂದ 3 ಕೆಂಪೇಗೌಡರ ಹೆಸರಿನಲ್ಲಿರುವ ರೆಕಾರ್ಡ ಆಫ್ ರೈಟ್ಸ ಎಂದರೆ ಸರಿ. ನಿಡಿ24 ರಲ್ಲಿ ವಿಭಾಗದ ಮೂಲಕ ಖಾತೆಯಾಗಿರುತ್ತದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಡಿ24 ಪೌತಿ ಆಧಾರದ ಮೇಲೆ ಖಾತೆಯಾಗಿದ್ದು, ವಿಭಾಗವಾಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನಿಪಿ6 ರಿಂದ 8 ರಲ್ಲಿ ಕೆಂಪೇಗೌಡರ ಮಕ್ಕಳ ಹೆಸರು ಮತ್ತು ಗಿರೀಗೌಡರ ಮಗನ ಹೆಸರು ಜಂಟಿಯಾಗಿರುತ್ತದೆ ಎಂದರೆ ಸರಿ. ನಿಪಿ13 ರಲ್ಲಿ ಎಲ್ಲರ ಹೆಸರು ಜಂಟಿಯಾಗಿರುತ್ತದೆ ಎಂದರೆ ಸರಿಯಲ್ಲ.

ಲಕ್ಷ್ಮಮ್ಮ ನನ್ನ ತಾಯಿಯಾಗಬೇಕು. ನನ್ನ ತಾಯಿಯಾದ 3 ನೇ ಪ್ರತಿವಾದಿ 10 ರಿಂದ 12 ನೇ ಪ್ರತಿವಾದಿಯರಿಂದ ದಿನಾಂಕ 26.12.2016 ರಂದು ದಾವ 3 ನೇ ಐಟಂ ಆಸ್ತಿಯನ್ನು ನಿಪಿ43 ರಂತೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಪಂಚಾಯಿತಿ ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.